ಕುಳಿತಿದ್ದರು. ಅವರಿಗೀಗ 106 ವರ್ಷಗಳಷ್ಟೇ. ಸುಕ್ಕುಗಟ್ಟಿದ ಮುಖವಾದರೂ ಸ್ಪಷ್ಟವಾದ ದೃಷ್ಟಿ ಮತ್ತು ಮಾತುಗಳು ಅವರದ್ದು.

ಸೀತಮ್ಮಜ್ಜಿಯ ಮನೆಯ ಮುಂದಿರುವ ನೆಲ್ಲಿಮರವು ಪಶ್ಚಿಮ ಘಟ್ಟದ ತಂಪು ಗಾಳಿಗೆ ಮುಖವೊಡ್ಡಿದರೆ ಕಣ್ಣು ಹಾಯಿಸಿದಷ್ಟೂ ಎತ್ತರಕ್ಕೂ, ವಿಶಾಲವಾಗೂ ನಿಂತಿದೆ ದುರ್ಗದ ಬೆಟ್ಟ. 'ಈ ಬಾರಿ ಏಕೋ ಮಳೆಯೇ ಬರಲಿಲ್ಲ. ಐದು ವರ್ಷಗಳ ಹಿಂದೆ ದುರ್ಗದ ಬೆಟ್ಟವು ಒಮ್ಮಿದೊಮ್ಮೆಗೇ ಸ್ಫೋಟಗೊಂಡಂತೆ ಕುಸಿದು ಬಿತ್ತು. ನಾನು ಋತುಮತಿಯಾಗುವ ಮೊದಲೇ ಮದುವೆಯಾಗಿ ಈ ಪರ್ಲ ಊರಿಗೆ ಬಂದಿದ್ದೆ. ಈ ಕಾಡಿನೊಳಗೆ ಎಂತೆಂಥ ಮಳೆಗಾಲವನ್ನು ಕಳೆದಿದ್ದೇನೆ. ಈ ದುರ್ಗದ ಬೆಟ್ಟದಮ್ಮ ನಮ್ಮನ್ನು ಕಾಪಾಡಿದ್ದಾಳೆಯೇ ಹೊರತು ನಮ್ಮ ಮೇಲೆಯೇ ಮುಗಿಬೀಳುವಂತೆ ಕುಸಿದದ್ದನ್ನು ಕಂಡಿಲ್ಲ' ಎನ್ನುತ್ತ 2019ರಲ್ಲಿ ಸಹ್ಯಾದ್ರಿ ಬೆಟ್ಟದಂಚಿನಲ್ಲಿ ನಡೆದ ಭಾರೀ ಭೂಕುಸಿತದ ದಿನವನ್ನು ಅಜ್ಜಿ ನೆನಪು ಮಾಡಿಕೊಂಡರು. 'ಏನು ಮಳೆ... ಏನು ಮಳೇ... ಆ ದಿನಾ. ನನಗೆ ಭಯವೇನೂ ಆಗಿರಲಿಲ್ಲ. ಅಂತಹ ಎಷ್ಟೋ ಮಳೆಗಳನ್ನು ಕಂಡಿದ್ದೇನೆ ನಾನು. ಮಧ್ಯಾಹ್ನ ಸರಿಸುಮಾರು ಊಟದ ಹೊತ್ತಿಗೆ ಬೆಟ್ಟದ ಮೇಲಿನಿಂದ ಭಾರೀ ಶಬ್ದ ಕೇಳಲು ಶುರುವಾಯಿತು. ಸಿಡಿಲೋ... ಅಥವಾ ವಿಮಾನದ ಸದ್ದೋ... ಗೊತ್ತಾಗದೇ ನಾವೆಲ್ಲ ಹೊರಗೆ ನೋಡುತ್ತಿದ್ದರೆ, ಕಣ್ಣೆದುರಿಗೇ ಇದ್ದ ದುರ್ಗದ ಬೆಟ್ಟದ ಮಧ್ಯಭಾಗದಿಂದ ಮಣ್ಣು ನೀರೆಲ್ಲ ಸೇರಿಕೊಂಡು... ಬೆಟ್ಟವೇ ಕರಗಿ ಹರಿದು ಬರುತ್ತಿದೆಯೇನೋ ಎಂಬಂತೆ ಕೆಂಪು ಪ್ರವಾಹ ನುಗ್ಗಿ ಬರುತ್ತಿತ್ತು. ಎಂಥ ಭಯಾನಕ ದೃಶ್ಯವಾಗಿತ್ತದು. ಅಂದು ದೇವರೇ ನಮ್ಮನ್ನೆಲ್ಲ ಕಾಪಾಡಿದ್ದ...' ಎನ್ನುತ್ತ ಒಂದು ಕ್ಷಣ ಆ ದಿನವನ್ನು ಕಣ್ಣಮುಂದೆ ತಂದುಕೊಂಡು ಮೌನವಾದರು.

ತಿರುವು ಮುರುವು ರಸ್ತೆಗಳಲ್ಲಿ ಇಳಿಯುತ್ತ ಪಶ್ಚಿಮಘಟ್ಟವನ್ನು ದಾಟಿಕೊಂಡು ಇನ್ನೇನು ದಕ್ಷಿಣಕನ್ನಡದ ಸಪಾಟು ನೆಲವನ್ನು ಪ್ರವೇಶಿಸಬೇಕು ಎನ್ನುವಷ್ಟರಲ್ಲಿ ಸಿಗುವ ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಲವಂತಿಗೆ ಗ್ರಾಮವಿದೆ. ಸಹ್ಯಾದ್ರಿಯ ತಪ್ಪಲು ಪ್ರದೇಶದಲ್ಲಿ, ಬೀಸುಗಾಳಿಯ ದಿಕ್ಕಿನಿಂದ ಬಚಾವ್ ಆಗುವಂತೆ ಇಲ್ಲಿ ಅನೇಕ ಊರುಗಳು ಬಹುಕಾಲದಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ. ಅಂತಹ ಒಂದು ಪುಟಾಣಿ ಊರು ಈ ಪರ್ಲ. ಅದಕ್ಕೆ ಹೊಂದಿಕೊಂಡಂತಿದೆ ಮಕ್ಕಿ ಎಂಬ ಊರು.

ದುರ್ಗದಬೆಟ್ಟವು ನಿರ್ಲಿಪ್ತವಾಗಿ ನಿಂತಿರುವುದನ್ನು ತನ್ನ ಜೀವನವಿಡೀ ನೋಡಿದ್ದ ಆನಂದ ಗೌಡರು ಅಂದು ಬೆಚ್ಚಿ ಬಿದ್ದಿದ್ದರು. ಅವರು ಮಕ್ಕಿ ನಿವಾಸಿ. ಬೆಟ್ಟದ ತಪ್ಪಲಿನಲ್ಲಿ ಸುಮಾರು ಮೂರೆಕರೆ ಜಮೀನು ಮಾಡಿಕೊಂಡು ಕಂಗಿನ ತೋಟ, ಭತ್ತದ ಗದ್ದೆಗಳನ್ನು ನಿರ್ವಹಿಸುತ್ತಿದ್ದರು. ಗದ್ದೆ ತೋಟಗಳ ಅಂಚಿನಲ್ಲಿ ಹರಿಯುತ್ತಿದ್ದ ಒಂದು ಸಪೂರ ತೋಡಿನಲ್ಲಿ ವರ್ಷವಿಡೀ ನೀರಿನ ಹರಿವಿರುತ್ತಿತ್ತು. ದುರ್ಗದ ಬೆಟ್ಟದ ಮಧ್ಯಭಾಗದಿಂದ ಒದ್ದುಕೊಂಡು ಬಂದ ಆ ಕೆಂಪು ಪ್ರವಾಹದಲ್ಲಿ ಮಣ್ಣಿನ ರಾಶಿ, ಮರಳಿನ ರಾಶಿ, ಭಾರೀ ಮರಗಳು ಇದ್ದವು. ಈ ಪ್ರವಾಹ



ಅವತ್ತು ದುರ್ಗದಬೆಟ್ಟದಿಂದ ಹೊರಹೊಮ್ಮಿದ ಕೆಸರು ಪ್ರವಾಹದಲ್ಲಿ ಏನಿತ್ತು... ಏನಿಲ್ಲ... ಭಾರೀ ಮರಗಳು, ಬಂಡೆಗಳು ಇದ್ದ ಆ ಪ್ರವಾಹದಲ್ಲಿ ಮರಳಿನ ರಾಶಿಯೇ ಬಂದು ನಮ್ಮ ಹೊಲದಲ್ಲಿ ಬಿತ್ತು. ತೋಟಗಳು ನಾಶವಾದವು. ಹಾಗೆ ಬೆಟ್ಟ ಕುಸಿದ ನಂತರದ ವರ್ಷಗಳಲ್ಲಿ ಒಳ್ಳೆಯ ಮಳೆಯೇ ಆಗಲಿಲ್ಲ. ಪ್ರತೀ ವರ್ಷ ಮಳೆ ಕಮ್ಮಿಯಾಗಿ, ಈ ವರ್ಷ ನೋಡಿ, ಇನ್ನೂ ಸರಿಯಾಗಿ ಮಳೆಯೇ ಬಂದಿಲ್ಲ.

**-ಸೀತಮ್ಮಜ್ಜಿ,** ಪರ್ಲ ನಿವಾಸಿ

### ಬೆಟ್ಟವೇರುವ ಹುಮ್ಮಸ್ಸಿನಲ್ಲಿ ಚಾರಣಿಗರ ದಂಡು

ಪಶ್ಚಿಮ ಘಟ್ಟದಲ್ಲಿರುವ ಬೆಟ್ಟಗಳಿಗೆ ಚಾರಣ ಹೋಗುವವರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗಿದೆ. ಕೋವಿಡ್ ನಂತರದ ದಿನಗಳಲ್ಲಿ ಚಾರಣಿಗರ ಸಂಖ್ಯೆ ನೂರು ಪಟ್ಟು ಜಾಸ್ತಿಯಾಗಿರಬಹುದು. ಒಂದೆರಡು ಉದಾಹರಣೆ ನೋಡಿ. ವಾರಾಂತ್ಯದಲ್ಲಿ ಎತ್ತಿನಭುಜ ಬೆಟ್ಟವನ್ನು ಹತ್ತುವುದಕ್ಕೆ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನರು ಬರುತ್ತಿದ್ದಾರೆ. ಎರ್ಮಾಯಿ ಫಾಲ್ಸ್‌ಗೆ ಭೇಟಿ ನೀಡುವವರ ಸಂಖ್ಯೆ ರಜಾದಿನಗಳಲ್ಲಿ ಸಾವಿರ ದಾಟಿದ್ದುಂಟು. ಬೆಟ್ಟಗಳ ಮೇಲೆ, ಫಾಲ್ಸ್‌ಗಳ ಬಳಿಯಲ್ಲಿ ಜನರು ಜಾತ್ರೆಗೆ ಸೇರಿದಂತೆ ನೆರೆಯುತ್ತಿದ್ದಾರೆ.

ಪಶ್ಚಿಮ ಘಟ್ಟವನ್ನು ಏರಲು ಬೃಹತ್ ಸಂಖ್ಯೆಯಲ್ಲಿ ಬರುತ್ತಿರುವ ಜನಸಾಗರದ ಅಗತ್ಯಗಳಿಗಾಗಿ ಅಲ್ಲಲ್ಲಿ ಹೋಮ್‌ಸ್ಟೇಗಳು, ಸೌಕರ್ಯಗಳು ನಿರ್ಮಾಣವಾಗುತ್ತಿವೆ. ಅದಕ್ಕಾಗಿ ನೀರಿನ ಹರಿವನ್ನು ಬದಲಿಸುವುದು, ರಸ್ತೆಗಳನ್ನು ನಿರ್ಮಿಸುವ ಉತ್ಸಾಹದಲ್ಲಿ ಸ್ಥಳೀಯರು ತೊಡಗಿಕೊಳ್ಳುವುದು ಸಹಜ ಎನ್ನುವಂತಾಗಿದೆ. ಇಂಥ ಪ್ರಯತ್ನಗಳಿಗೆ ಪ್ರವಾಸೋದ್ಯಮದ ನೆಪದಲ್ಲಿ ಪ್ರೋತ್ಸಾಹವೂ ದೊರೆಯುತ್ತದೆ. ಅಂತಿಮ ಪರಿಣಾಮವೇನಿದ್ದರೂ ಹಸಿರುನಾಶ ಮತ್ತು ಸ್ಥಳೀಯರ ನೆಮ್ಮದಿ ನಾಶವಷ್ಟೇ ಆಗಿದೆ.



ಭೂಕುಸಿತದಿಂದಾಗಿ ಕೃಷಿ ಭೂಮಿ ಕಳೆದುಕೊಂಡ ಆನಂದ ಗೌಡರ ಮನೆ ಚಿತ್ರ: ಪುರುಜಿತ್ ಭಿಡೆ